ಕುಡಿಯುವ ನೀರಿನ ಬವಣೆ ಕೂಡ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಯಾವಾಗ ನೀರು ಒದಗಿಸಿ ಕೊಡುತ್ತಾರೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಅಲ್ಲಿ ಈಗ ವಿನಾಗಿದೆ ಎಂದರೆ ತಾಂತ್ರಿಕ ತಜ್ಞರ ಅಡಚಣೆಯಿಂದ ತಡವಾಗಿದೆ. ಆದರೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ಆದ್ದರಿಂದ ಆದಷ್ಟು ಬೇಗ ಈ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ಸಹ ಪರಿಶೀಲಿಸಲಾಗುವುದು.

ಧಾರವಾಡ ಜಿಲ್ಲೆಯಲ್ಲಿನ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆ

೫೬. (೧೪) ಶ್ರೀ ಬಿ. ಜೆ. ಬಣಕಾರ್ (ಹಿರೇಕೇರೂರು).—ಮಾನ್ಯ ಗ್ರಾಮಿಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ೧೯೮೧-೮೨ನೇ ಇಸ್ವಿಯಲ್ಲಿ ಹಾಗೂ ೧೯೮೨-೮೩ನೇ ಇಸ್ವಿಯಲ್ಲಿ ಧಾರವಾಡ ಜಿಲ್ಲೆಯ ಎಲ್ಲಾ ತಾಲೂಕುವಾರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಕೈಗೊಂಡ ಕಾಮಗಾರಿ ಕೆಲಸಗಳ ಸಂಖ್ಯೆ ಹೆಸರು ಹಾಗೂ ಅವುಗಳಿಗೆ ಮಾಡಿದ ಖರ್ಚಿನ ಹಣವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ) (೧) ೧೯೮೧-೮೨ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ೧೭ ತಾಲೂಕುಗಳಲ್ಲಿ ೧೨೬೧ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಿ ಅವುಗಳಲ್ಲಿ ೧೦೩೮ ಕೆಲಸಗಳನ್ನು ಪೂರ್ತಿಗೊಳಿಸಿದ್ದಾರೆ. ೧೯೮೧-೮೨ನೇ ಸಾಲಿನಲ್ಲಿ ಖರ್ಚಾದ ಒಟ್ಟು ಹಣ ೧,೫೯,೭೭,೧೯೫-೦೦ ರೂಪಾಯಿಗಳು ೧೨೩ ಕೆಲಸಗಳು ಪೂರ್ತಿಯಾಗದೆ ವರ್ಷಾಂತ್ಯದಲ್ಲಿ ಬಾಕಿ ಇದ್ದು ಅವುಗಳನ್ನು ಪೂರ್ತಿಗೊಳಿಸಲು ಬೇಕಾಗಿದ್ದ ಹಣ ೮೧,೭೭,೦೪೫-೦೦ ರೂಪಾಯಿಗಳು.

(೨) ೧೯೮೨-೮೩ನೇ ಸಾಲಿನಲ್ಲಿ ೧೩೪೭ ಕೆಲಸಗಳನ್ನು ಪ್ರಾರಂಭಿಸಿ ಅವುಗಳಲ್ಲಿ ೮೧೧ ಕೆಲಸಗಳನ್ನು ಪೂರ್ತಿಗೊಳಿಸಿದ್ದಾರೆ. ಕಳೆದ ವರ್ಷ ಖರ್ಚಾದ ಒಟ್ಟು ಹಣ ೨,೧೪,೭೨,೩೪೫ ರೂಪಾಯಿಗಳು ವರ್ಷಾಂತ್ಯ ಈ ೫೩೬ ಕೆಲಸಗಳು ಪೂರ್ತಿಯಾಗದೆ ಉಳಿದಿದ್ದು ಅವುಗಳನ್ನು ಪೂರ್ತಿಗೊಳಿಸಲು ಬೇಕಾದ ಹಣ ೧,೩೨,೪೪,೮೭೬ ರೂಪಾಯಿಗಳು ತಾಲ್ಲೂಕುವಾರು ಮತ್ತು ತರಹೆವಾರು ಕೆಲಸಗಳ ಪೂರ್ಣ ವಿವರಗಳನ್ನು ಲಗತ್ತಿಸಿರುವ ಹೇಳಿಕೆಯಲ್ಲಿ ಕೊಡಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ಸಾಮಾಜಿಕ ಅರಣ್ಯ				ಕೆರೆಗಳು				ಚಿಕ್ಕ ನೀರಾವರಿ			
		೮೧-೮೨		೮೨-೮೩		೮೧-೮೨		೮೨-೮೩		೮೧-೮೨		೮೨-೮೩	
		ಕೆಲಸ	ಖರ್ಚು	ಕೆಲಸ	ಖರ್ಚು	ಕೆಲಸ	ಖರ್ಚು	ಕೆಲಸ	ಖರ್ಚು				
೧	ಬ್ಯಾಡಗಿ	೧	೦.೦೧	೫	೦.೦೫	...	...	...	...	೨೭	೧,೬೧	...	...
೨	ಧಾರವಾಡ	...	...	೪	೦.೫೯	...	...	...	...	...	...	...	...
೩	ಗದಗ	೫	೦.೨೯	೩	೦.೯೯	...	...	೩	೦.೨೬	೧	೦.೧೦	...	...
೪	ಹಾನಗಲ್	೨	೦.೯೭	೩	೧.೬೬	...	...	...	...	೨೮	೭.೭೦	...	...
೫	ಹಾವೇರಿ	...	...	೫	೧.೦೬	...	...	೧	೦.೦೫	೧೦	೧.೯೬	...	...
೬	ಹಿರೇಕೆರೂರ್	...	...	೪	೦.೪೦	...		೨	೦.೧೦	೨೯	೨.೯೪	...	...
೭	ಹುಬ್ಬಳ್ಳಿ	೧	೦.೪೯	೨	೧,೨೭	...	...	೨	೦.೧೬	೨	೦.೦೯	..	...
೮	ಕಲಘಟಗಿ	೫	೦.೭೪	೪	೧.೦೪	...	...	೩	೦.೧೫	೧೧	೦.೪೮	...	...
೯	ಕುಂದಗೋಳ್	೧	೦.೦೩	೧	೦.೮೩	...	...	೧	೦.೦೭	...	...	...	...
೧೦	ಮುಂಡರಗಿ	೫	೦.೨೭	೨	೦.೭೫	...	...	೧	೦.೪೯	೭	೧.೨೭	೧೧	೧.೮೪
೧೧	ನರಗುಂದ	೨	೦.೩೯	೩	೦.೮೮	...	...	...	...	...	...	...	...
೧೨	ನವಲಗುಂದ	೪	೦.೪೬	೭	೦.೮೯	...	...	೩	೦.೧೬	...	...	೩	೦.೪೧
೧೩	ರಾಣೆಬೆನ್ನೂರು	೫	೦.೭೭	೬	೧.೫೨	...	...	...	..	೧೬	೨.೪೦	...	...
೧೪	ರೋಣ	...	...	೨	೦.೧೬	...	...	೯	೧.೦೭	...	...	...	...
೧೫	ಸವಣೂರ್	೧	೦.೪೯	೪	೧.೯೪	...	...	...	...	೧೪	೩.೩೩	...	...
೧೬	ಶಿಗ್ಗಾಂವ್	೩	೦.೮೯	೫	೨,೧೮	...	...	...	...	೨೬	೩.೪೦	...	...
೧೭	ಶಿರಹಟ್ಟಿ	೫	೦.೯೮	೫	೦.೮೨	...	...	...	...	೧	೦.೦೫	...	...
	ಒಟ್ಟು	೪೦	೬.೭೮	೬೫	೧೭.೧೩	...	—	೨೫	೨.೫೧	೧೬೫	೨೫.೩೪	೧೪	೨.೨೫

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ಭೂ ಸಾರ ಸಂರಕ್ಷಣೆ ೮೧–೮೨ ಕೆಲಸ	೮೧–೮೨ ಖರ್ಚು	೮೨–೮೩ ಕೆಲಸ	೮೨–೮೩ ಖರ್ಚು	ಕಂಡಿಯಂಪ ನೀರಿನ ಬಾವಿ ೮೧–೮೨ ಕೆಲಸ	೮೧–೮೨ ಖರ್ಚು	೮೨–೮೩ ಕೆಲಸ	೮೨–೮೩ ಖರ್ಚು	ಗ್ರಾಮೀಣ ರಸ್ತೆಗಳು ೮೧–೮೨ ಕೆಲಸ	೮೧–೮೨ ಖರ್ಚು	೮೨–೮೩ ಕೆಲಸ	೮೨–೮೩ ಖರ್ಚು
೧	ಬ್ಯಾಡಗಿ	...	...	೩	೦.೪೦	೮	೦.೬೧	...	...	೯	೫.೧೨	೫೧	೬.೯೬
೨	ಧಾರವಾಡ	೧೩	೪.೦೮	೩	೧.೦೩	೧೩	೪.೦೦	...	...	೯	೨.೬೩	೧೪	೭.೨೩
೩	ಗದಗ	೪೫	೨,೬೨	೪೭	೩.೬೯	೨	೦,೦೧	೪	೦,೨೧	೧೩	೦.೮೩	೨೮	೧೦.೬೨
೪	ಹಾನಗಲ್	.	...	...	...	...	...	...	...	೨	೦.೧೮	೫೪	೧೦.೮೮
೫	ಹಾವೇರಿ	೧೬	೧.೦೭	...	...	೭	೦.೨೩	೬	೦.೬೨	೫	೩.೩೧	೭೧	೧೦–೧೪
೬	ಹಿರೇಕೆರೂರ್	...	...	೧	೦.೦೦೪	—	...	...	...	೭	೨.೯೩	೫೬	೭.೩೧
೭	ಹುಬ್ಬಳ್ಳಿ	...	...	೫	೦.೭೨	.	...	...	...	೧೫	೩.೧೪	೨೩	೭.೯೬
೮	ಕಲಘಟಗಿ	೧	೦.೦೩	...	...	...	...	...	...	೧೦	೨.೭೩	೧೧	೫.೩೭
೯	ಕುಂದಗೋಳ್	೨	೦.೧೮	...	...	...	...	...	...	೬	೩.೬೪	೧೭	೬.೪೯
೧೦	ಮುಂದರಗಿ	೧೦	೧.೪೦	...	...	—	...	೧	೦.೦೧	೨೬	೩.೬೭	೨೩	೫.೮೩
೧೧	ನರಗುಂದ	...	...	...	...	...	...	...	...	೧೩	೩.೨೨	೧೯	೪.೩೨
೧೨	ನವಲಗುಂದ	...	...	೧೯	೧.೦೭	...	...	...	...	೫	೨.೩೬	೧೪	೪.೫೪
೧೩	ರಾಣೆಬೆನ್ನೂರು	೯	೮.೬೭	೪	೦.೨೨	...	...	...	...	...	...	೭೦	೧೧.೦೨
೧೪	ರೋಣ್	೩೪	೩.೪೦	೧೦	೧.೩೦	...	...	೨	೦ ೩೪	೧೭	೪.೩೭	೫೭	೧೦.೩೪
೧೫	ಸವಣೂರು	...	...	೭	೦·೮೯	೪	೦.೧೧	೨	೦.೨೩	೭	೩.೬೯	೩೧	೫.೬೬
೧೬	ಶಿಗಾಂವ್	೧	೦.೧೧	...	...	...	...	...	...	೯	೩.೩೫	೪೬	೬.೯೦
೧೭	ಶಿರಹಟ್ಟಿ	೧೦೨	೫.೪೭	...	...	...	...	೧೨	೧.೯೫	೧೪	೨.೯೭	೩೩	೯.೫೩
	ಒಟ್ಟು	೨೩೩	೧೮.೯೫	೯೯	೯.೩೨	೩೪	೪.೯೬	೨೭	೩.೨೬	೧೬೭	೪೮.೧೪	೬೧೮	೧೩೧.೧೦

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ಶಾಲಾ ಕಟ್ಟಡ				ಇತರೆ ಕಟ್ಟಡಗಳು				ಇನ್ನಿತರೆ			
		೮೧–೮೨		೮೨–೮೩		೮೧–೮೨		೮೨–೮೩		೮೧–೮೨		೮೨–೮೩	
		ಕೆಲಸ	ಖರ್ಚು	ಕೆಲಸ	ಖರ್ಚು	ಕೆಲಸ	ಖರ್ಚು	ಕೆಲಸ	ಖರ್ಚು	ಕೆಲಸ	ಖರ್ಚು	ಕೆಲಸ	ಖರ್ಚು
೧	ಬ್ಯಾಡಗಿ	೭	೧.೭೨	೬	೦.೪೫	...	...	೭	೦.೨೧	೨೭	೧.೮೯	೧೯	೦.೮೨
೨	ಧಾರವಾಡ	೬	೦.೧೩	೧೧	೧.೪೮	...	...	೬	೧.೧೦	೨೯	೨.೧೨	೪೭	೪.೪೬
೩	ಗದಗ	೫	೧.೦೦	೩	೦.೮೭	...	...	೮	೧.೧೨	೨೮	೨.೫೫	೧೦	೦.೫೪
೪	ಹಾನಗಲ್	೧೯	೪.೩೦	೨	೦.೦೫	...	...	೨	೦.೦೬	೧೦	೦.೬೧	೨೨	೧.೭೫
೫	ಹಾವೇರಿ	೭	೧.೭೩	೧೨	೦.೯೩	...	...	...	...	೨೩	೧.೯೨	೫೯	೨.೫೭
೬	ಹಿರೆಕೆರೂರು	೩೭	೩.೧೮	೧	೦.೦೩	೧	೦.೩೬	೧೦	೧.೬೬	೨೭	೧.೩೩	೧೭	೧.೨೯
೭	ಹಂಬ್ಳಿ	...	...	೩	೦.೩೪	...	...	೭	೧.೫೮	೯	೦.೭೪	೧೫	೧.೫೨
೮	ಕಲ್‌ಗಟಗಿ	೩	೦.೯೫	೪	೦.೨೧	...	...	೬	೧.೬೧	೮	೦.೪೮	೧೧	೧.೪೯
೯	ಕುಂದಗೋಳ	೫	೧.೦೧	೯	೨.೧೬	...	...	೪	೦.೨೦	೧೯	೧.೦೮	೧೮	೧,೫೧
೧೦	ಮುಂಡರಗಿ	೫	೦.೯೫	೩	೦.೫೬	...	...	...	...	೨೦	೬.೨೦	೧	೦.೩೦
೧೧	ನರಗುಂದ	...	...	೧	೦.೬೮	೨	೦.೩೦	೨	೦.೫೭	೧೩	೧.೨೯	೪	೦.೫೩
೧೨	ಪವಲಗುಂದ	೨	೦.೪೬	...	...	...	...	...	...	೩೬	೨.೬೮	೨೬	೧.೫೫
೧೩	ರಾಣೆಬೆನ್ನೂರು	೨	೦,೧೩	೭	೧.೧೯	...	...	೩	೦.೨೧	೨೭	೧.೦೩	೨೮	೧.೮೫
೧೪	ರೋಣ	೯	೧.೯೬	೨೨	೨.೪೩	೩	೦.೧೦	೧೦	೧.೧೨	೪೬	೮.೧೩	೬	೦.೫೪
೧೫	ಸವಣೂರು	೮	೧.೨೮	೩	೦.೦೯	...	...	೫	೧,೧೮	೨೯	೧.೮೫	೧೮	೧.೮೮
೧೬	ಶಿಗಾಂವ್	೪	೦.೯೭	೪	೦.೧೯	...	...	೩	೦.೩೯	೨೬	೨,೦೧	೧೬	೧.೪೩
೧೭	ಶಿರಹಟ್ಟಿ	೬	೧.೩೯	೧೪	೦.೫೨	...	...	೭	೧,೨೨	೩೫	೧.೫೭	೭	೦.೭೨
	ಒಟ್ಟು	೧೨೫	೨೨.೧೬	೧೦೫	೧೧.೬೮	೬	೦.೬೬	೭೭	೧೨.೫೩	೪೧೨	೩೬.೪೮	೩೨೫	೨೩.೮೧

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	೮೧–೮೨ ಒಟ್ಟು		೮೨–೮೩	
		ಕೆಲಸ	ಖರ್ಚು	ಕೆಲಸ	ಖರ್ಚು
೧	ಬ್ಯಾಡಿಗಿ	೭೯	೧೦.೯೫	೯೧	೯.೪೪
೨	ಧಾರವಾಡ	೫೭	೮.೮೯	೭೫	೧೬.೧೯
೩	ಗದಗ್	೧೯೯	೭.೪೦	೧೦೪	೧೮:೨೯
೪	ಹಾನ್‌ಗಲ್	೫೪	೧೩.೭೫	೮೩	೧೪.೩೯
೫	ಹಾವೇರಿ	೬೮	೧೧.೩೯	೧೫೪	೧೫.೪೭
೬	ಹಿರೆಕೆರೂರು	೧೦೧	೧೦.೬೩	೯೧	೧೦.೭೯
೭	ಹುಬ್ಬಳ್ಳಿ	೨೭	೪.೪೬	೫೭	೧೩.೫೫
೮	ಕಲಘಟ್ಗಿ	೩೮	೫.೪೦	೩೯	೮.೮೮
೯	ಕುಂದಗೋಳ್	೩೩	೫.೯೪	೫೦	೧೧.೨೫
೧೦	ಮುಂಡರಗಿ	೭೩	೧೩.೭೬	೪೨	೯.೭೯
೧೧	ನರಗುಂದ	೩೦	೫.೧೯	೨೯	೬.೯೯
೧೨	ನವಲಗುಂದ	೪೭	೫.೯೭	೭೨	೮.೬೧
೧೩	ರಾಣೆಬೆನ್ನೂರು	೫೯	೫.೦೪	೧೨೦	೧೬.೦೪
೧೪	ರೋಣ	೧೦೯	೧೮.೦೮	೧೧೮	೧೭.೩೦
೧೫	ಶಾವನೂರು	೬೩	೧೦.೭೩	೭೦	೧೧.೮೭
೧೬	ಶಿಗಾಂವ್	೭೧	೯.೭೪	೭೪	೧೧.೧೦
೧೭	ಶಿವಹಟ್ಟಿ	೧೫೩	೧೨.೪೪	೭೮	೧೪.೭೬
	ಒಟ್ಟು	೧೨೬೧	೧೫೯.೭೬	೧೩೪೭	೨೧೪.೭೧

ಶ್ರೀ ಬಿ. ಜೆ. ಬಣಕಾರ್.—ಮಾನ್ಯ ಅಧ್ಯಕ್ಷರೇ, ೧೯೮೨–೮೩ನೇ ಸಾಲಿನಲ್ಲಿ ೧೩೪೭ ಕೆಲಸಗಳನ್ನು ಪ್ರಾರಂಭಿಸಿ ಅವುಗಳಿಗೆ ೨,೧೪,೭೨,೩೪೫ ರೂಪಾಯಿಗಳು ಖರ್ಚಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆಂದರೆ ಶೇಕಡ ೧೦೦ರಲ್ಲಿ ೩೦ರಷ್ಟು ಕೆಲಸಗಳು ಪೂರ್ತಿಯಾಗಿಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ನೀವು ಇಟ್ಟಿರತಕ್ಕಂಥ ಹಣದಲ್ಲಿ ಎಲ್ಲಾ ಹಣ ಖರ್ಚಾಗಿಲ್ಲ. ಈ ರೀತಿ ಖರ್ಚಾಗದೆ ಇರುವುದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರಾ ? ಮತ್ತು ಪೂರ್ತಿಯಾಗದೇ ಉಳಿದಿರತಕ್ಕಂಥ ಕೆಲಸಗಳನ್ನು ಪೂರ್ತಿ ಮಾಡುವಂತೆ ಆದೇಶ ಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್ —ಮಾನ್ಯ ಸದಸ್ಯರು ಹೇಳಿದಂತೆ ಕೆಲವು ಕಡೆ ಕೆಲಸಗಳು ಪೂರ್ತಿಯಾಗದೆ ಉಳಿದಿವೆ. ಆ ಎಲ್ಲಾ ಕೆಲಸಗಳು ಪೂರ್ತಿಯಾಗದೆ ಇರುವುದಕ್ಕೆ ನಾನಾ ರೀತಿಯ ಕಾರಣಗಳಿವೆ. ಈಗ ಎನ್.ಆರ್.ಇ.ಪಿ. ಸ್ಕೀಮ್‌ನಲ್ಲಿಲೋಕೋಪಯೋಗಿ ಇಲಾಖೆಯವರು ರಸ್ತೆಯ ಕೆಲಸ ಮಾಡುತ್ತಿರುತ್ತಾರೆ. ಮತ್ತೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಬೇರೆ ಕೆಲಸ ಮಾಡುತ್ತಿರುತ್ತಾರೆ. ಅದೇ

ರೀತಿಯಲ್ಲಿ ಮೀನುಗಾರಿಕೆ ಇಲಾಖೆಯವರು ಒಂದು ರೀತಿಯ ಕೆಲಸ ಮಾಡುತ್ತಿರುತ್ತಾರೆ. ಎಲ್ಲಾ ಇಲಾಖೆಯವರಿಗೂ ಲಕ್ಷಾಂತರ ರೂಪಾಯಿಗಳನ್ನು ಒದಗಿಸಿ ಕೊಟ್ಟಿರುತ್ತೇವೆ ಈಗ ಲೋಕೋಪಯೋಗಿ ಇಲಾಖೆಯವರು ಜಲ್ಲಿ ತಂದು ಹಾಕಿಕೊಂಡು ರೂಲರ್ ಸಿಗಲಿಲ್ಲವೆಂದು ಹೇಳಿ ಕೆಲಸವನ್ನು ನಿಲ್ಲಿಸಿರುತ್ತಾರೆ. ಮತ್ತೆ ಮನೆಗಳನ್ನು ಕಟ್ಟುವ ಕೆಲಸದಲ್ಲಿ ಕೆಲಸ ಶುರು ಮಾಡಿ ಪಿಲ್ಲೊ ತನಕ ಕೆಲಸ ಮಾಡಿ ಅಲ್ಲಿಗೆ ನಿಲ್ಲಿಸಿರುತ್ತಾರೆ. ಆದ್ದರಿಂದ ತಡವಾಗಿದೆಯೇ ವಿನಃ ಬೇರೇನೂ ಅಲ್ಲ. ಆದಷ್ಟು ಬೇಗ ಎಲ್ಲಾ ಕೆಲಸ ಗಳನ್ನು ಮುಗಿಸುವಂತೆ ನಾನು ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇನೆ, ಮತ್ತು ಬೇಗ ಮುಗಿಸು ವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಪ್ರೌಢಶಾಲೆಗಳ ಮಂಜೂರಾತಿಯ ಬಗ್ಗೆ

ವಿಷ. **ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆ ಗಳಿಗೆ ಉತ್ತರಿಸುವರೇ,**

ಅ) ೧೯೮೩–೮೪ನೆಯ ಸಾಲಿನಲ್ಲಿ ಮಂಜೂರಾದ (ಖಾಸಗಿ-ಸರ್ಕಾರಿ) ಜಿಲ್ಲಾವಾರು ಸಂಖ್ಯೆ ಗಳನ್ನು ದಯೆಯಿಟ್ಟು ಕೊಡುವುದು.

ಆ) ಗುಲ್ಬರ್ಗಾ ವಿಭಾಗದ ಸಹ ನಿರ್ದೇಶಕರಿಂದ ಶಿಫಾರಸ್ಸು ಮಾಡಲ್ಪಟ್ಟ ಪ್ರೌಢಶಾಲೆಗಳ ಸಂಖ್ಯೆಗಳ ಮತ್ತು ಅವುಗಳಲ್ಲಿ ಮಂಜೂರಾದ ಪ್ರೌಢಶಾಲೆಗಳಲ್ಲಿ ಸಂಖ್ಯೆ (ಜಿಲ್ಲಾವಾರು ಮಾಹಿತಿಯನ್ನು ಕೊಡುವುದು)

ಇ) ಪ್ರೌಢಶಾಲೆಗಳ ಮಂಜೂರಾತಿಯನ್ನು ಮಾಡುವಾಗ ಬಳಸುವ ಆಧಾರ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ೩೦ ದಯವಿಟ್ಟು ಪಟ್ಟಿ 'ಅ'ವನ್ನು ನೋಡಿ.

ಆ) ಗುಲ್ಬರ್ಗಾ ವಿಭಾಗದ ಸಹ ನಿರ್ದೇಶಕರು ೧೫೬ ಅರ್ಜಿಗಳನ್ನು ಕಳುಹಿಸಿದ್ದಾರೆ ಒಟ್ಟಿನಲ್ಲಿ ೪೬ ಪ್ರೌಢಶಾಲೆಗಳು ಮಂಜೂರಾಗಿದೆ. ದಯವಿಟ್ಟು ಪಟ್ಟಿ 'ಬಿ'ವನ್ನು ನೋಡಿ.

ಇ) **ಅವಶ್ಯಕತೆ, ಅನುಕೂಲತೆಗಳ ಪೋಷಕ ಶಾಲೆಗಳ ಸಂಖ್ಯೆಯು ಮೇರೆಗೆ.

**ಮಾನ್ಯ ಸದಸ್ಯರು ಹಾಜರಿರಲಿಲ್ಲ.